ಮಾಡುತ್ತಿದ್ದೆವು. ಆಗ 'ಇನ್ನೊಂಚೂರು ಹೀಗೆ ರಿಹರ್ಸಲ್ ಮಾಡಬಹುದಲ್ವಾ?' ಎಂದು ಅವರು ನನ್ನನ್ನು ಜೋರಾಗಿ ತಬ್ಬಿಕೊಂಡರು. ಆ ಅಪ್ಪುಗೆಯಿಂದ ನಾನು ಒಮ್ಮೆಲೇ ತಬ್ಬಿಬ್ಬಾದೆ. ತುಂಬ ಅಸಹಜವಾಗಿತ್ತು ಆ ವರ್ತನೆ. ತಕ್ಷಣವೇ ನಾನು ನಿರ್ದೇಶಕರಿದ್ದಲ್ಲಿಗೆ ಹೋಗಿ 'ಇನ್ನು ಮುಂದೆ ನಾನು ರಿಹರ್ಸಲ್‌ಗೆ ಬರುವುದಿಲ್ಲ. ಬರೀ ಶೂಟಿಂಗ್‌ಗೆ ಅಷ್ಟೇ ಕರೆಯಿರಿ' ಎಂದು ಹೇಳಿ ಕ್ಯಾರಾವಾನ್‌ಗೆ ಬಂದುಬಿಟ್ಟೆ. ಅವತ್ತಿನ ನಂತರ ನಾನು ಬರೀ ಶೂಟಿಂಗ್‌ಗೆ ಮಾತ್ರ ಹೋಗಿ ನಟಿಸಿ ಬರುತ್ತಿದ್ದೆ.

ನನ್ನ ಪ್ರತಿಭಟನೆಯಿಂದ ಅರ್ಜುನ್ ಸರ್ಜಾ ಏನೂ ವಿಚಲಿತರಾದಂತೆ ಅನಿಸಲಿಲ್ಲ. ಅದಾದ ಮೇಲೆ ಅವರು ನನ್ನ ಜೊತೆ ಮಾತನಾಡುವಾಗ ಬಳಸಿದ ಭಾಷೆಯೂ ಸಭ್ಯವಾಗಿರಲಿಲ್ಲ. ಮತ್ತೆ ಮತ್ತೆ ಡಿನ್ನರ್‌ಗೆ ಕರೆಯುತ್ತಿದ್ದರು. 'ರೆಸಾರ್ಟ್‌ಗೆ ಹೋಗೋಣ ಬಾ' ಎಂದು ಕರೆಯಲು ಶುರುಮಾಡಿದರು. ಆಗೆಲ್ಲ ನಾನು ನೇರವಾಗಿ ಅವರ ಕಣ್ಣಲ್ಲಿ ಕಣ್ಣಿಟ್ಟು 'ಇಲ್ಲ, ನಾನು ಬರುವುದಿಲ್ಲ' ಎಂದೇ ಹೇಳಿದ್ದೆ. ಅದನ್ನೂ ಅವರು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. 'ನೋ ಎಂದರೆ ನೋ' ಎಂಬುದರ ಅರ್ಥವೇ ಅವರಿಗೆ ಆಗುತ್ತಿಲ್ಲವಲ್ಲ ಎಂದು ನನಗೆ ನಿಜವಾಗಲೂ ಆಶ್ಚರ್ಯವಾಗಿತ್ತು. ಬಹುಶಃ ಅವರು ಹೀಗೆ ಕರೆದಾಗ ಯಾರೂ 'ನೋ' ಎಂದು ಹೇಳಿರಲಿಲ್ಲವೋ ಏನೋ.

## ಶೋಷಣೆಯ ವಿರುದ್ಧ ಒಕ್ಕೊರಲ ಸ್ವರ

ಶೋಷಣೆಯ ಅನುಭವ ನನಗಷ್ಟೇ ಆಗಿದ್ದಲ್ಲ; ನನ್ನ ಜೊತೆ ಇನ್ನೂ ಹಲವು ಧ್ವನಿಗಳು ಇವೆ ಎಂಬ ಧೈರ್ಯವನ್ನೂ, ತನಗಾದ ಅನುಭವವನ್ನು ಯಾವುದೇ ಸಂದರ್ಭದಲ್ಲಿಯಾದರೂ ಹಂಚಿಕೊಳ್ಳಬಹುದು ಎಂಬ ದಿಟ್ಟತನವನ್ನೂ ಹೆಣ್ಣಿಗೆ ನೀಡಿದ್ದು 'ಮಿ ಟೂ' ಅಭಿಯಾನ ಮಾಡಿದ ದೊಡ್ಡ ಕ್ರಾಂತಿ. ಇಂದು ಬೇರೊಬ್ಬರ ಹೆಸರು ಇರುವ ಜಾಗದಲ್ಲಿ ನಾಳೆ ತನ್ನ ಹೆಸರೂ ಇರಬಹುದು ಎಂಬ ಎಚ್ಚರವನ್ನು ಪುರುಷನಲ್ಲಿ ಹುಟ್ಟಿಸಬಹುದಾದ ಅಭಿಯಾನ ಇದು.

ಬಾಲಿವುಡ್, ಹಾಲಿವುಡ್‌ಗಳಲ್ಲಿಯೂ ಕೂಡ ಈಗಷ್ಟೇ ಒಂದು ಸಣ್ಣ ಪ್ರತಿರೋಧದ ಧ್ವನಿ ಕೇಳಿಸುತ್ತಿದೆ. ಆದರೆ ಹೇಳದಿರುವ ಕಥೆಗಳು ಸಾಕಷ್ಟಿವೆ. ಯಾಕೆಂದರೆ ಇಂಥ ಪ್ರತಿರೋಧವನ್ನು ಹತ್ತಿಕ್ಕುವ ಪ್ರಯತ್ನಗಳು ತುಂಬ ಪ್ರಬಲವಾಗಿವೆ.

ಇಂಥ ಹಲವು ಅನುಭವಗಳನ್ನು ಹಂಚಿಕೊಳ್ಳಬಹುದು. ಆದರೆ ಅವುಗಳನ್ನು ಸಾಬೀತುಪಡಿಸುವುದು ತುಂಬ ಕಷ್ಟ. ಯಾಕೆಂದರೆ ಆ ಶೋಷಣೆಗೆ ಯಾವ ಪುರಾವೆಗಳೂ ಇರುವುದಿಲ್ಲ. ಇನ್ನೂ ಹಲವು ಪ್ರಸಂಗಗಳಲ್ಲಿ ಹೆಣ್ಣು ಪೂರ್ತಿ ಪ್ರಜ್ಞಾವಸ್ಥೆಯಲ್ಲಿ ಇಲ್ಲದೆಯೇ ಇರಬಹುದು. ಅವನ್ನು ಸಾಬೀತುಪಡಿಸುವುದು ಹೇಗೆ?

'ಮಿ ಟೂ' ಅಭಿಯಾನದಲ್ಲಿ ತಮ್ಮ ಕಥೆಗಳೊಂದಿಗೆ ಬಂದು ದಿಟ್ಟವಾಗಿ ನಿಲ್ಲುತ್ತಿರುವ ಹೆಣ್ಣುಮಕ್ಕಳ ಬಗ್ಗೆ ನನಗೆ ಅಪಾರ ಗೌರವವಿದೆ. ಹೆಮ್ಮೆಯಿದೆ. ಯಾಕೆಂದರೆ 'ಅದೆಷ್ಟು ಕಷ್ಟದ ಕೆಲಸ, ಅದಕ್ಕೆಷ್ಟು ಧೈರ್ಯ ಬೇಕು' ಎನ್ನುವುದು ನನಗೆ ಗೊತ್ತು. ನನಗೂ ಅಂಥ ಹಲವು ಅನುಭವಗಳು ಆಗಿವೆ.

ಆದರೆ ಸಾರ್ವಜನಿಕ ಬದುಕಿನಲ್ಲಿ ಬಂದು ನಿಂತು ಇಡೀ ಸಮಾಜವನ್ನು ಎದುರು ಹಾಕಿಕೊಂಡು ಎದುರಾಗುವ ಪ್ರಶ್ನೆಗಳು, ವ್ಯಂಗ್ಯ, ಅಪಮಾನಗಳನ್ನು ಸಹಿಸಿಕೊಂಡು 'ಮಿ ಟೂ' ಅಭಿಯಾನದಲ್ಲಿ ತಮ್ಮ ಕಥೆಯನ್ನು ಹಂಚಿಕೊಳ್ಳುವ ಧೈರ್ಯ ಎಷ್ಟು ಹೆಣ್ಣುಮಕ್ಕಳಿಗೆ ಇದೆ? ಈ ಎಲ್ಲವನ್ನೂ ಎದುರಿಸುವ ಧೈರ್ಯವನ್ನು ನಾವಿನ್ನೂ ಗಳಿಸಿಕೊಳ್ಳಬೇಕಿದೆ. ಇಲ್ಲಿ ನನ್ನ ಕಥೆಯನ್ನು ನಾನು ಹಂಚಿಕೊಂಡಿದ್ದೇನೆ. ನಾನು ಅಂತಲ್ಲ, ಎಲ್ಲ ಹೆಣ್ಣುಮಕ್ಕಳ ಬದುಕಿನಲ್ಲಿಯೂ ಇಂಥ ಎಷ್ಟೋ ಕಥೆಗಳು ಇದ್ದೇ ಇರುತ್ತವೆ. ಅವರೆಲ್ಲರಿಗೂ ಅದನ್ನು ಹಂಚಿಕೊಳ್ಳಲು ಖಂಡಿತ ಧೈರ್ಯ ಬರುತ್ತದೆ ಎಂಬ ನಂಬಿಕೆ ನನಗಿದೆ. ಬಹುಶಃ ಅವರಿಗೆ ಇನ್ನೂ ಒಂದಿಷ್ಟು ಸಮಯ ಬೇಕು.

ನಿರೂಪಣೆ: ಪದ್ಮನಾಭ ಭಟ್


